# ಪರಾಗ ಸ್ಪರ್ಶ



ಪಾತರಗಿತ್ತಿಯ ಅಧರಗಳಲ್ಲಿ
ಅಡಗಿವೆ ಜಗತ್ತಿನ
ಎಲ್ಲಕ್ಕಿಂತ ಸುಂದರ ಪ್ರೇಮಪತ್ರಗಳು

ಚಿಟ್ಟೆಯು ಹಾರುವ ಹೂವು

ಹಾರಿ ಹೋಗುವುದು
ಒಂದು ಹೂವಿನ ನಗು
ಒಂದು ನಿರಾಶ ಹೂವಿನೆಡೆಗೆ

ಒಂದು ಹೂವಿನ ಹೃದಯ ಹಾರುವುದು ಇನ್ನೊಂದರೆಡೆಗೆ
ಒಂದು ಹೂವಿನ ಸ್ವಪ್ನ
ಇಳಿಯುವುದು ಇನ್ನೊಂದು ಹೂವಿನ ಸ್ವಪ್ನದಲ್ಲಿ

ಎರಡು ಹೂಗಳ ಮಧ್ಯದ ಸಮಯ
ಒಂದು ಹೊಸ ಪ್ರಪಂಚದ ಕಲ್ಪನೆ

ಪಾತರಗಿತ್ತಿಯಂತೆ ಸೃಜಿಸುವ
ಔದಾರ್ಯ ಇರಬೇಕು
ಸಂದೇಶವಾಹಕನಲ್ಲಿ

● **ಹಿಂದಿ ಮೂಲ: ಹೇಮಂತ್ ದೇವಲೇಕರ್**
**ಕನ್ನಡಕ್ಕೆ: ಉತ್ತಮ ಎಲಿಗಾರ**
ಕಲೆ: ವಾಗೀಶ ಹೆಗಡೆ

